ಅ.ದಾ. ನಂ.23/2017

ಪಿಡಬ್ಲ್ಯೂ : 3

ಸಾಕ್ಷಿಯನ್ನು ಇಂದು ದಿನಾಂಕ:11-07-2022 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ವಿ ಜಿ ಸಿ ವಕೀಲರಿಂದ

1. ವಾದಿ ಮತ್ತು ಪ್ರತಿವಾದಿಯರು ನನಗೆ ಅಣ್ಣ ತಮ್ಮಂದಿರು. ಯಲ್ಲಪ್ಪನಿಗೆ 3 ಜನ ಗಂಡು ಮಕ್ಕಳು. ವಾದಿ ಮತ್ತು ಪ್ರತಿವಾದಿಯರು ತಮ್ಮ ತಂದೆ ಜೀವಂತ ಇದ್ದಾಗ ವಾಟ್ನಿ ಮಾಡಿಕೊಂಡಿರುತ್ತಾರೆ. ಒಟ್ಟು 3 ಮನೆತನಕ್ಕೆ 12 ಎಕರೆ 14 ಗುಂಟೆ ಜಮೀನು ಇತ್ತು. ಯಲ್ಲಪ್ಪನ ಪಾಲಿಗೆ 7 ಎಕರೆ 14 ಗುಂಟೆಆಸ್ತಿ ಬಂದಿತ್ತು. ಸದರಿ ವಾದಿ ಪಾಲಿಗೆ ದಾವಾ ಆಸ್ತಿ ಬಂದಿರುತ್ತದೆ. 1999 ರಲ್ಲಿ ಯಾವುದೇ ವಾಟ್ನಿ ಮಾಡಿಕೊಂಡಿಲ್ಲ ಆದರೆ 2012 ರಲ್ಲಿ ನಾನೇ ಮುಂದು ನಿಂತು ವಾಟ್ನಿ ಮಾಡಿಕೊಟ್ಟಿರುತ್ತೇನೆ. 1999 ರಲ್ಲಿ ಆದ ವಾಟ್ನಿ ಯ ಪ್ರಕಾರ ದಾವಾ ಜಮೀನು 1 ನೇ ಪ್ರತಿವಾದಿಯ ಪಾಲಿಗೆ ಬಂದು ಮತ್ತು ದೇವಣಗಾಂವದಲ್ಲಿ ಗ್ರಾಮದಲ್ಲಿರುವ ಮನೆ ವಾದಿಯ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ.

2. ಅದೇ ಪ್ರಕಾರ ಮ್ಯುಟೇಶನ ಡೈರಿ ನಂಬರ 7820 ಮಂಜೂರಾಗಿದೆ ಎಂದರೆ ಸರಿಯಲ್ಲ. ಆವತ್ತಿನಿಂದ 1 ನೇ ಪ್ರತಿವಾದಿ ಸಾಗುವಳಿ ಮಾಡುತ್ತಾ ಬಂದಿರುತ್ತಾನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತೀರಿಕೊಂಡಿರುತ್ತಾನೆ ಎಂದರೆ ನಿಜ. 1 ನೇ ಪ್ರತಿವಾದಿ 3 ಜನ ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು ಇದ್ದಾಳೆ ಮತ್ತು ಆತನ ಹೆಂಡತಿ ಕೂಡಾ ಜೀವಂತವಾಗಿದ್ದಾಳೆ. ನನಗೆ ವಾದಿ ಮತ್ತು ಪ್ರತಿವಾದಿಯರ ಮನೆತನದ ಬಗ್ಗೆ ಮಾಹಿತಿ ಇರದೇ ಇದ್ದರು ಕೂಡಾ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ